ಜನಸಂಖ್ಯೆಯನ್ನು ಹೊಂದಿರುವಂಥ ಗ್ರಾಮಗಳಿಗೆ ಹೊಸದಾಗಿ ವಸತಿ ನಿಲಯಗಳನ್ನು ಮಾಡುತ್ತೀರಾ? ಎಂದು ತಮ್ಮ ಮುಖಾಂತರ ಮಾನ್ಯ ಮುಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಡಿ. ಸುಧಾಕರ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ ಶೇ. 50 ಭಾಗದಷ್ಟು ಸಂಖ್ಯಾ ಬಲವನ್ನು ಹೆಚ್ಚು ಮಾಡಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿದೆ. ಇದರ ಜೊತೆಗೆ ಮಾನ್ಯ ಸದಸ್ಯರು ಅವರ ಕ್ಷೇತ್ರದಲ್ಲಿ ಪ್ರಿಮೆಟ್ರಿಕ್ ಹಾಸ್ಟೆಲ್ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದರೆ, ನಾನು ಅದರ ಬಗ್ಗೆ ಪರಿಶೀಲನೆಯನ್ನು ಮಾಡಿ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ ಅಟ್ಟೂರು: ಹೊಸದಾಗಿ ಹಾಸ್ಟೆಲ್‌ಗಳನ್ನು ಕೊಡುತ್ತಿರಾ?

ಶ್ರೀ ಡಿ. ಸುಧಾಕರ: ಅದನ್ನು ಸಹ ಪರಿಶೀಲನೆ ಮಾಡಿ ಮಂಜೂರು ಮಾಡಿ ಕೊಡುತ್ತೇವೆ.

ಬೀದರ್ ನಗರದ ಸಾರ್ವಜನಿಕ ಆಸ್ಪತ್ರೆಯ ಬಗ್ಗೆ

1172 ಶ್ರೀ ರಹೀಮ್ ಖಾನ್ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ನಗರದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ಸಿಬ್ಬಂದಿಗಳ ಕೊರತೆಯಿದ್ದು, ಸ್ವಚ್ಛತೆ ಇಲ್ಲದೇ ರೋಗಿಗಳ ಚಿಕಿತ್ಸೆಗೆ ಅನಾನುಕೂಲ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಆಸ್ಪತ್ರೆಯನ್ನು 250 ಹಾಸಿಗೆಯುಳ್ಳ ಆಸ್ಪತ್ರೆಯಾಗಿ ಪರಿವರ್ತಿಸಿ ಮೇಲ್ದರ್ಜೆಗೇರಿಸಲಾಗುವುದೆಂದು ಈ ಹಿಂದೆ ಸರ್ಕಾರವು ಘೋಷಣೆ ಮಾಡಿದ್ದರೂ ಸಹ ಇದೂವರೆವಿಗೂ ಅದು ಕಾರ್ಯರೂಪಕ್ಕೆ ಬರದಿರಲು ಕಾರಣವೇನು; ಈ ಆಸ್ಪತ್ರೆಯಲ್ಲಿ ರಕ್ತ ನಿಧಿ ಬ್ಯಾಂಕ್ ಸಹ ಇಲ್ಲದೇ ರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಆಸ್ಪತ್ರೆಯಲ್ಲಿ ಸಂಚಾರಿ ಆಂಬ್ಯುಲೆನ್ಸ್ ಸಹ ಇಲ್ಲದೇ ಸರಿಯಾದ ಸಮಯದಲ್ಲಿ ಚಿಕಿತ್ಸಾ ಸೌಲಭ್ಯ ದೊರೆಯದೆ ಅನಾನುಕೂಲವಾಗುತ್ತಿರುವುದನ್ನು ಸರಿಪಡಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ರಾಮಚಂದ್ರಗೌಡ (ವೈದ್ಯಕೀಯ ಶಿಕ್ಷಣ ಸಚಿವರು)

ಅ) ಇಲ್ಲ.

ಆ) 750 ಹಾಸಿಗೆಗಳಿಗೆ ಹೆಚ್ಚಿಸಲು ಮಂಜೂರಾತಿ ನೀಡಿದೆ. ಆಡಳಿತಾಥ್ಮಕ ಪ್ರಕ್ರಿಯೆ ಮುಂದುವರಿಯುತ್ತಿದೆ.

ಈ ಆಸ್ಪತ್ರೆಯಲ್ಲಿ ಸಕಲ ಸೌಲಭ್ಯಗಳೊಂದಿಗೆ 24 ಗಂಟೆ ನಿರಂತರವಾಗಿ 1997ರಿಂದ ರಕ್ತ ನಿಧಿ ಕಾರ್ಯನಿರ್ವಹಿಸುತ್ತಿದೆ.

ಇ) ಈ ಆಸ್ಪತ್ರೆಯಲ್ಲಿ ಈಗಾಗಲೇ 2 ಅಂಬ್ಯುಲೆನ್ಸ್‌ಗಳು ಸುಸ್ಥಿತಿಯಲ್ಲಿದ್ದು, ರೋಗಿಗಳ ಅನುಕೂಲತೆಗಾಗಿ ಉಪಯೋಗಿಸಲಾಗುತ್ತಿದೆ. ಇದರೊಂದಿಗೆ 24 ಗಂಟೆ ನಿರಂತರವಾಗಿ 108ರ ಸಂಖ್ಯೆಯ ಆಂಬ್ಯುಲೆನ್ಸ್ ಕಾರ್ಯನಿರ್ವಹಿಸುತ್ತಿದೆ.

ಶ್ರೀ ರಹೀಮ ಖಾನ್: ಮಾನ್ಯ ಅಧ್ಯಕ್ಷರೇ, ಬೀದರ್ ಡಿಸ್ಟ್ರಿಕ್‌ನಲ್ಲಿ shortage of staff ಮತ್ತೆ including Medical Collegeನಲ್ಲಿ staff shortage ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ message ಇಲ್ಲವೆಂದು ಬಂದಿದೆ. ನಾನು ಮೊನ್ನೆ ದೆಹಲಿಗೆ ಹೋಗಿದ್ದೆ. ಅಲ್ಲಿ MCIನಲ್ಲಿ Health Minister Officeನಲ್ಲಿ recordಇದೆ. Shortage of Doctors even including in hospital and medical collegeನಲ್ಲಿ ಅದರ ಸಲುವಾಗಿ reject ಮಾಡುತ್ತೇವೆಂದು ಆಗ reject ಮಾಡಿದರು.

ಅಧ್ಯಕ್ಷರು: ಮಾನ್ಯ ರಹೀಮ್ ಖಾನ್‌ರವರೆ, ತಾವು ಮಾನ್ಯ ಮಂತ್ರಿಯವರನ್ನು ಪ್ರಶ್ನೆಯನ್ನು ಕೇಳುತ್ತೇನೆಂದು ಮೊದಲು ಹೇಳಿ, ಅಮೇಲೆ ಅವರು ಉತ್ತರ ಹೇಳುತ್ತಾರೆ.

ಶ್ರೀ ರಹೀಮ್ ಖಾನ್: ಮಾನ್ಯ ಅಧ್ಯಕ್ಷರೆ, ಬೀದರ್ ಆಸ್ಪತ್ರೆಯಲ್ಲಿ ಡಾಕ್ಟರ್ staff shortage ಇದೆ. Even Medical Collegeನಲ್ಲಿಯೂ ಇದೆ. ಅದಕ್ಕೆ ಸರ್ಕಾರದಿಂದ ಗೊತ್ತಿಲ್ಲವೆಂದು ಉತ್ತರವನ್ನು ಕೊಟ್ಟಿದೆ. ಅದರ ಬಗ್ಗೆ ಮಾನ್ಯ ಮಂತ್ರಿಯವರು ಉತ್ತರ ಹೇಳಬೇಕು. ಇನ್ನು ಅಲ್ಲಿ ಆಸ್ಪತ್ರೆಯಲ್ಲಿ ಡಾಕ್ಟರ್‌ಗಳಾಗಲಿ, ನರ್ಸ್‌ಗಳಾಗಲಿ ತುಂಬಾ rough and tough ಆಗಿ ಮಾತನಾಡುತ್ತಾರೆ. ಅಲ್ಲಿ ಬಡವರಿಗೆ ತುಂಬಾ ತೊಂದರೆ ಕೊಡತ್ತಾರೆ. ಆಸ್ಪತ್ರೆಯಲ್ಲಿ cleanness ಇಲ್ಲ. ಅಲ್ಲಿ labour rooms ಅಗಲಿ, ಯಾವ ರೂಮ್‌ಗೆ ಹೋದರೂ ಒಳಗೆ ಹೋಗಲು ಸಾಧ್ಯವಾಗುವುದಿಲ್ಲ.

ಶ್ರೀ ರಾಮಚಂದ್ರಗೌಡ: ಮಾನ್ಯ ಅಧ್ಯಕ್ಷರೆ, ಬೀದರ್‌ನ ಆಸ್ಪತ್ರೆ ಬಹಳ ಹಳೆಯದಾದರೂ ಕೂಡ ಈಗ ಇದು ವೈದ್ಯಕೀಯ ಶಿಕ್ಷಣ ಇಲಾಖೆಗೆ ಬಂದಿದೆ. ಅಲ್ಲಿ ಎರಡು ವರ್ಷಗಳು ಕಳೆದು ಇವತ್ತು ಮೂರನೇ ವರ್ಷಕ್ಕೆ ಕಾಲಿರಿಸುತ್ತಿದ್ದೇವೆ. ನಿಜ, ನಮಗೆ ಅಲ್ಲಿ ವೈದ್ಯಕೀಯ ಶಿಕ್ಷಣ ಅಧ್ಯಾಪಕರ

ಕೊರತೆ ಇತ್ತು. ಹಾಗೆ ಇದ್ದದ್ದಕ್ಕೆ ನಾವು MCI ನಿಂದ permission ತೆಗೆದುಕೊಳ್ಳಬೇಕಾದರೆ, ನಾವು ಇದಕ್ಕೆ ಸಂಬಂಧಪಟ್ಟಂಥ ವೈದ್ಯರನ್ನು ಪಾಠ ಮಾಡುವುದಕ್ಕಾಗಿ ಬೆಂಗಳೂರಿನಿಂದ ಇಲ್ಲಿ ಹೆಚ್ಚಿಗೆ ಇದ್ದವರನ್ನು ಅಲ್ಲಿಗೆ ವರ್ಗಾವಣೆ ಮಾಡಿ, ಅದಕ್ಕೆ ಈಗ ನಮಗೆ ಅನುಮತಿ ಸಿಕ್ಕಿದೆ. ಇದು ಹೊಸ ಕಾಲೇಜು ಆದ ಕಾರಣ, ಒಟ್ಟಾಗಿ 5 ವರ್ಷಗಳು ಮುಗಿಯುವುದರೊಳಗಾಗಿ 750 ಬೆಡ್‌ಗಳು ಬೇಕಾಗುತ್ತದೆ. ಇದಕ್ಕೆ ವಾಸ್ತವವಾಗಿ 2 ವರ್ಷಗಳಾಗಿರುವುದರಿಂದ 250ಕ್ಕಿಂತ ಹೆಚ್ಚಿಗೆ ಬೆಡ್ ಮಾಡಿಕೊಂಡು ಈ ವರ್ಷದ ಕೊನೆಯೊಳಗೆ 450 ಬೆಡ್‌ಗಳನ್ನು ವರ್ಷಕ್ಕೆ 150 ಬೆಡ್‌ಗಳ ಪ್ರಕಾರ 450 ಬೆಡ್‌ಗಳನ್ನು ಮಾಡಿಕೊಂಡು 5 ವರ್ಷದೊಳಗೆ 750 ಬೆಡ್‌ಗಳನ್ನು ಮಾಡುವಂಥ ವ್ಯವಸ್ಥೆಯನ್ನು ನಾವು ಮಾಡುತ್ತಿದ್ದೇವೆ. ಈ ಆಸ್ಪತ್ರೆಯಲ್ಲಿ ರಕ್ತನಿಧಿ ಕೂಡ ಇಲ್ಲವೆಂದು ಹೇಳಿದರು. ಈಗ ಅಲ್ಲಿ ರಕ್ತನಿಧಿ ಕೂಡ ಇದೆ. ಅದು 24 ಗಂಟೆಗಳ ಕಾಲ ನಿರಂತರವಾಗಿ ಸೇವೆ ನಡೆಯುತ್ತಿದೆ. ಯಾರಾದರೂ ವೈದ್ಯರುಗಳು, ಸಂಬಂಧಪಟ್ಟಂಥವರು ಏನಾದರೂ ಕಿರುಕುಳವನ್ನು ಕೊಟ್ಟಿದ್ದಾರೆ, ಅದನ್ನು ನಮ್ಮ ಗಮನಕ್ಕೆ ತಂದರೆ ಅವರ ಮೇಲೆ ನಾವು ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇವೆಂಬ ಭರವಸೆಯನ್ನು ಸಂಪೂರ್ಣವಾಗಿ ಮಾನ್ಯ ಶಾಸಕರಿಗೆ ಕೊಡಲು ಇಚ್ಛಿಸುತ್ತೇನೆ.

ಶ್ರೀ ಬಂಡೆಪ್ಪ ಕಾಶಂಪುರ್: ಮಾನ್ಯ ಅಧ್ಯಕ್ಷರೆ, ಬೀದರ್ ವಿಷಯ ಬಹಳ ಚಿಂತೆ ಮಾಡುವಂಥಾದ್ದನ್ನು ಇವತ್ತು ಮಾನ್ಯ ರಹೀಮ್ ಖಾನ್‌ರವರು ತೆಗೆದು ಕೊಂಡಿದ್ದಾರೆ. ನನಗೂ ಅದೇ ಕ್ಷೇತ್ರ ಬರುತ್ತದೆ. ಈಗ ಮಾನ್ಯ ಸಚಿವರು ಮಾತನಾಡುವಾಗ ಆಸ್ಪತ್ರೆ ಅವರ ವಶಕ್ಕೆ ಬಂದಿದೆಯೆಂದು ಹೇಳಿದರು. ನಾವು ಅಲ್ಲಿ visit ಮಾಡಿದಾಗ ಇನ್ನೂ Health Departmentನಲ್ಲೆ ಇದೆಯೆಂಬ ಅನುಮಾನವಿದೆ. ನಾನು ಮೊನ್ನೆ ಒಂದು ತಿಂಗಳ ಮೊದಲು ಒಂದು ಅಪಘಾತವಾಗಿತ್ತು. ನಾನು ಅಲ್ಲಿಗೆ ಸ್ವತಃ ಹೋಗಿದ್ದೇನೆ. ಅಲ್ಲಿ Health Departmentನ ಹಳೆ ಡಾಕ್ಟರ್‌ಗಳು ಯಾರು ಇದ್ದಾರೆ. ಅವರೇ attend ಮಾಡುತ್ತಿದ್ದಾರೆ. ನಿಮ್ಮ Medical Collegeನ 150 staff ಅನ್ನು ಅಲ್ಲಿ ಓದುವುದಕ್ಕೆ ಎಂದು ಏನು ಇಟ್ಟಿದ್ದೀರಿ. ಅವರು ಅಲ್ಲಿಂದ District Surgeon ಆಸ್ಪತ್ರೆಯಿಂದ ಒಂದು requisition ಅನ್ನು Medical College Principalಗೆ ಕೊಡುತ್ತಾರೆ. ನೀವು ಅಲ್ಲಿಂದ ಡಾಕ್ಟರ್‌ಗಳನ್ನು depute ಮಾಡಿಯೆಂದು ಕೊಡುತ್ತಾರೆ. ಇಂಥ ಒಂದು ಕೆಟ್ಟ ವ್ಯವಸ್ಥೆ ಅಲ್ಲಿ ನಡೆಯುತ್ತಿದೆ. ಇದನ್ನು

ಸನ್ಮಾನ್ಯ ಸಚಿವರು ಬಹಳ ಗಂಭೀರವಾಗಿ ಪರಿಗಣಿಸಬೇಕು. ನಾನು ಈ ಬಗ್ಗೆ ಸ್ವತಃ ಅನುಭವವನ್ನು ಪಡೆದಿದ್ದೇನೆ, ಬೇರೆ ಯಾರು ಅಲ್ಲ. ನಾನು ಆಗ ಫೋನ್ ಮಾಡಿ ಇದು ಒಂದರಲ್ಲೆ ಬರುವಾಗ ಇದಕ್ಕೆ requisition ಏಕೆ ಬೇಕೆಂದು ಕೇಳಿದೆ. ಇನ್ನೊಂದು ವಿಷಯ ಗಂಭೀರವಾಗಿ ಚಿಂತನೆ ಮಾಡುವಂಥಾದ್ದು ಏನೆಂದರೆ ಅಲ್ಲಿ ಸುಮಾರು 150 ಡಾಕ್ಟರ್‌ಗಳು Medical Collegeನಲ್ಲಿದ್ದಾಗ ಅವರು ಎಷ್ಟರಮಟ್ಟಿಗೆ ಇವತ್ತು ಕೆಲಸ ಮಾಡುತ್ತಾರೆಂಬ ಬಗ್ಗೆ ನೀವು ವರದಿಯನ್ನು ತರಿಸಿಕೊಳ್ಳಬೇಕು. ಅಲ್ಲಿ ಒಂದು biometric signature ಮಾಡುವುದನ್ನು ಇಡಬೇಕು. ಇವತ್ತು ಅಲ್ಲಿ ಯಾರು ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ. Medical College ಬರೀ ಓದುವುದಕ್ಕೆ ಆಗಿದೆ. ಜನರಿಗೆ ಸೇವೆಯನ್ನು ಸಲ್ಲಿಸುವುದಕ್ಕೆ ಆಗಲ್ಲ. ಇನ್ನೊಂದು ವಿಚಾರವೇನೆಂದರೆ ಅಲ್ಲಿ ಆಂಬ್ಯುಲೇನ್ಸ್ ಬಗ್ಗೆ ಏನು ಹೇಳಿದ್ದೀರಿ. ಅಲ್ಲಿ ಈಗ ಎರಡು ಆಂಬ್ಯುಲೆನ್ಸ್‌ಗಳು ಇವೆ. ಆದರೆ ಬೀದರ್‌ಗೆ ಯಾವುದೇ ಒಂದು serious case ಬಂದರೆ ಅವರು immediate ಆಗಿ ಹೈದರಬಾದ್‌ಗೆ refer ಮಾಡುತ್ತಾರೆ. ಇವತ್ತು ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ಏನೆಂದರೆ, ಇವತ್ತು health hospital ಇರುವ ಪರಿಸ್ಥಿತಿಯಲ್ಲೆ ಇತ್ತು. ಇಲ್ಲಿ ನಿಮ್ಮ Medical College ಬಂದ ಮೇಲೆ ಇನ್ನೂ ಸುಧಾರಣೆಯಾಗಬೇಕು. ನಿಮ್ಮ ಫಂಡ್ ಹೆಚ್ಚಿಗೆ ಆಗಿದೆ. ಇಲ್ಲಿ ಹೈದರಬಾದ್‌ಗೆ ಹೋಗುವ ಪೇಸೆಂಟ್‌ಗಳಿಗೆ ತಾವು free ಯಾಗಿ ಅಲ್ಲಿಂದ ಕಳುಹಿಸಬೇಕೆಂದು ತಮ್ಮ ಮುಖಾಂತರ ಸನ್ಮಾನ್ಯ ಸಚಿವರನ್ನು ಕೇಳಬಯಸುತ್ತೇನೆ.

ಶ್ರೀ ಈಶ್ವರ್ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಬೀದರ್ ಆಸ್ಪತ್ರೆ ಬಗ್ಗೆ ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುವುದೇನೆಂದರೆ, ಈಗ ಅವರು 750 ಹಾಸಿಗೆಗಳ ಆಸ್ಪತ್ರೆಗೆ ಇದನ್ನು ಮೇಲ್ದರ್ಜೆಗೆ ಏರಿಸುತ್ತೇವೆಂದು ಹೇಳಿದರು. ನನಗೆ ತಿಳಿದ ಹಾಗೆ ಇದು 400 ಹಾಸಿಗೆಗಳ ಆಸ್ಪತ್ರೆಯೆಂದು ಇದೆ. ಅದರೆ ವಾಸ್ತವಾಂಶದಲ್ಲಿ ಇದು ನಮ್ಮ ಜಿಲ್ಲೆಗೆ ಸೀಮಿತವಾಗಿದೆಯೇ ಎಂಬುದು ನಮಗೆ ಗೊತ್ತಿಲ್ಲ. ಇಲ್ಲಿ ಮಾನ್ಯ ಆರೋಗ್ಯ ಸಚಿವರು ಇದ್ದಾರೆ, ಆ ಬಗ್ಗೆ ಹೇಳಬೆಕು. ಅಲ್ಲಿ 300 ಹಾಸಿಗೆಗಳ ಆಸ್ಪತ್ರೆ, 400 ಹಾಸಿಗೆಗಳ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸಿದ್ದೇವೆಂದು ನಾಲ್ಕೈದು ವರ್ಷಗಳಿಂದ ಹೇಳುತ್ತಿದ್ದಾರೆ. ಇಲ್ಲಿ 300 ಹಾಸಿಗೆಗಳ ಆಸ್ಪತ್ರೆ ಇದೆ. MCIನವರು ಪರಿವೀಕ್ಷಣೆ ಮಾಡಲು ಬಂದಾಗ, ಬೇರೆ ಕಡೆಯಿಂದ, ಆಯುರ್ವೇದಿಕ್ ಕಾಲೇಜ್‌ನಿಂದ ಹಾಸಿಗೆಗಳನ್ನು ಮಂಚಗಳನ್ನು..

ಅಧ್ಯಕ್ಷರು: ತಾವು specific ಆಗಿ ಪ್ರಶ್ನೆಯನ್ನು ಕೇಳಿ.

ಶ್ರೀ ಈಶ್ವರ ಖಂಡ್ರೆ: ತಾವು ಬೇಡವೆಂದರೆ ನಾನು ಕೇಳುವುದೇ ಇಲ್ಲ. ನಮ್ಮ Medical College ಆ ರೀತಿ ಆಗಬಾರದು. ಇದು 300 ಹಾಸಿಗೆ ಆಸ್ಪತ್ರೆ, 400 ಹಾಸಿಗೆಗಳ ಆಸ್ಪತ್ರೆ ಎಂದು ಬರೀ ಪೇಪರ್ ಮೇಲೆ ಇದೆ. ಆದರೆ ವಾಸ್ತವಾಂಶದಲ್ಲಿ 300 ಹಾಸಿಗೆಗಳ ಆಸ್ಪತ್ರೆ ಎಂದು ಮಾತ್ರ ಚಾಲ್ತಿಯಲ್ಲಿರುವಂಥಾದುದ್ದು. ರೋಗಿಗಳು ಬಂದರೆ ನೆಲದ ಮೇಲೆ ಮಲಗುತ್ತಾರೆ. ಅಲ್ಲಿ ಬೆಡ್ ಶೀಟ್‌ಗಳು ಇರುವುದಿಲ್ಲ ಹಾಗೆ ಹಾಕುತ್ತಿದ್ದಾರೆ. ಇದು ಬರೀ ಬೀದರ್‌ನ ಜಿಲ್ಲಾ ಆಸ್ಪತ್ರೆಯಲ್ಲಿ ಅಷ್ಟೆ ಅಲ್ಲ. ತಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮಲ್ಲಿ ನೂರು ಹಾಸಿಗೆಗಳ ಆಸ್ಪತ್ರೆ ಎಂದು ಇರುವಂಥಾದ್ದು. ಅಲ್ಲಿ ಬರೀ 56 ಹಾಸಿಗೆಗಳು ಮಾತ್ರ, ಉಳಿದ 44 ಹಾಸಿಗೆಗಳು ಎಲ್ಲಿ ಹೋಗಿದೆಯೋ ಗೊತ್ತಿಲ್ಲ.

ಅಧ್ಯಕ್ಷರು: ಈಗಾಗಲೆ 15 ನಿಮಿಷಗಳು ಆಯಿತು. Question Hour ಒಂದಕ್ಕೆ 10 ನಿಮಿಷಗಳಿಗೆ ಇರುವುದು.

ಶ್ರೀ ಈಶ್ವರ ಖಂಡ್ರೆ: ಬೀದರ್‌ನಲ್ಲೂ ನಿಖರವಾಗಿ ಎಷ್ಟು ಹಾಸಿಗೆಗಳ ಆಸ್ಪತ್ರೆ ಇದೆಯೆಂದು ಹೇಳಿ. ಮಾನ್ಯ ಸಚಿವರು ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಹೀಮ್ ಖಾನ್: ಮಾನ್ಯ ಅಧ್ಯಕ್ಷರೆ, ಈಗ ಮೂರು ವರ್ಷಗಳಾಯಿತು. ಆ medical collegeಗೆ land ಇಲ್ಲ. ಅಲ್ಲಿ ಏನು building ಕಟ್ಟಿದ್ದಾರೆ. ಅದು polytechnic college ಹೆಸರಿನಲ್ಲಿ ಇದೆ. ಅದನ್ನು MCIನವರು objection ಮಾಡಿದ್ದಾರೆ. ಇಲ್ಲಿ Labour Minister ಇದ್ದಾರೆ. ಈ Land Medical Collegeಗೆ transfer ಆಗಿಲ್ಲ. ಅವರು 3 ತಿಂಗಳು time ಕೊಟ್ಟಿದ್ದಾರೆ, otherwise cancel ಮಾಡುತ್ತೇವೆಂದು writing ನಲ್ಲಿ letter ಬಂದಿದೆ.

ಶ್ರೀ ರಾಮಚಂದ್ರಗೌಡ: ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಈಶ್ವರ ಖಂಡ್ರೆಯವರು ಮತ್ತು ರಹೀಂ ಖಾನ್‌ರವರು ಬಹಳ ಪ್ರಮುಖವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಕಾಲೇಜು ಹೊಸದು. Transition periodನಲ್ಲಿ ಈ ರೀತಿ ತೊಂದರೆಯಾಗುವುದು ಸಹಜ. ಇದು ನಮಗೆ ಗೊತ್ತಿರುವಂಥಾದ್ದೇ. ಇದೊಂದೇ ಕಾಲೇಜಲ್ಲ, ಶಿವಮೊಗ್ಗದಲ್ಲಿರಬಹುದು, ಹಾಸನದಲ್ಲಿರಬಹುದು, ಮಂಡ್ಯದಲ್ಲಿರಬಹುದು, ಈ ರೀತಿ ಎಲ್ಲ ಹೊಸ ಕಾಲೇಜುಗಳಿಗೆ recognition, permission ತೆಗೆದುಕೊಳ್ಳಬೇಕಾದರೆ ಬಹಳ ಸಮಸ್ಯೆಗಳು ಬರುತ್ತವೆ. ಈ ಸಮಸ್ಯೆಗಳನ್ನು ಎದುರಿಸುವುದಕ್ಕೋಸ್ಕರವಾಗಿ

ಹೊರ ರಾಜ್ಯಗಳಿಂದ professor ಗಳನ್ನು ಹೆಚ್ಚಿನ ಸಂಬಳದ ಮೇಲೆ ನಾವು ತೆಗೆದುಕೊಂಡು ಬಂದಿದ್ದೇವೆ. ಕೆಲವರು ಬರುತ್ತಾರೆ, ಆದರೆ 6–7 ತಿಂಗಳು ಕೆಲಸ ಮಾಡಿ ನಂತರ ಕೆಲಸ ಬಿಟ್ಟು ಹೋಗಿ ಬಿಡುತ್ತಾರೆ. ಏಕೆಂದರೆ ಅವರಿಗೆ private collegeಗಳಲ್ಲಿ ಲಕ್ಷಾಂತರ ಸಂಬಳ ಸಿಗುತ್ತದೆ. ಈ ಪರಿಸ್ಥಿತಿಯಲ್ಲೂ ಕೂಡ ಸರ್ಕಾರ ಬಹಳ ಕೆಲಸ ಮಾಡಿ, ಹೊರಗಡೆಯಿಂದ Professor ಗಳನ್ನು convince ಮಾಡಿ ಕರೆದುಕೊಂಡು ಬಂದು ಅವರಿಗೆ ಹೆಚ್ಚು ಸಂಬಳ ಕೊಟ್ಟು ಮಾಡುತ್ತಿದ್ದೇವೆ. ಇಲ್ಲಿ ಏನಾಗಿದೆ ಎಂದರೆ, ಈ ಆಸ್ಪತ್ರೆ ಪ್ರಾರಂಭವಾಗಿ 2 ವರ್ಷಗಳಾಗಿವೆ. ಐದು ವರ್ಷಕ್ಕೆ 750 ಹಾಸಿಗೆಗಳು ಎಂದರೆ, ಒಂದು ವರ್ಷಕ್ಕೆ 150 ಬೆಡ್ಡುಗಳು ಎನ್ನುವ ಪ್ರಕಾರವಾಗಿ 2 ವರ್ಷಗಳಲ್ಲಿ 300 ಬೆಡ್ಡುಗಳಿವೆ. ಈಗ ಮೂರನೇ ವರ್ಷ ಶುರುವಾಗಿರುವುದರಿಂದ ಈ ವರ್ಷದ ಕೊನೆಯೊಳಗಾಗಿ ನಾವು ಮತ್ತೆ 150 ಬೆಡ್ಡುಗಳನ್ನು ಮಾಡಲೇಬೇಕು. ಒಟ್ಟು 750 ಬೆಡ್ಡುಗಳನ್ನು ಮಾಡಬೇಕು. ಸಂಪೂರ್ಣವಾಗಿ ಜವಾಬ್ದಾರಿಯನ್ನು ತೆಗೆದುಕೊಂಡು ಇದನ್ನು ಮಾಡುತ್ತೇವೆ. ಅಲ್ಲಿ ಬೇರೆ ಏನಾದರೂ ತೊಂದರೆಗಳಿದ್ದರೆ ದಯಮಾಡಿ ತಾವು ಕಾಗದ ಬರೆಯಿರಿ, ನಾನು ಅದನ್ನು ಏನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಆದ್ದರಿಂದ, ಯಾವುದೇ ಆತಂಕ ಪಡುವಂಥ ಅವಶ್ಯಕತೆಯಿಲ್ಲ ಎನ್ನುವ ಮಾತನ್ನು ನಾನು ತಮ್ಮ ಮೂಲಕ ಅವರಿಗೆ ತಿಳಿಸುತ್ತೇನೆ.

ಅಧ್ಯಕ್ಷರು: ರಾಮಚಂದ್ರಗೌಡರೇ, ಲ್ಯಾಂಡ್ ಬಗ್ಗೆಯೂ ಹೇಳಿಬಿಡಿ.

ಶ್ರೀ ರಾಮಚಂದ್ರಗೌಡ: ಅಲ್ಲಿ ಮೊದಲು ಕಾಲೇಜು ಒಂದು ಕಡೆ ಇತ್ತು. ಆಸ್ಪತ್ರೆ ಒಂದು ಕಡೆ ಇತ್ತು. ಆ ಸಂದರ್ಭದಲ್ಲಿ ಅಲ್ಲಿಯ ಜಿಲ್ಲಾಧಿಕಾರಿಗಳು, ಅವರೆಡರ ಮಧ್ಯದಲ್ಲಿ ಹೋಗುತ್ತಿದ್ದಂಥ National Highwayಯನ್ನು ಬಂದ್ ಮಾಡಿ ಬೇರೆ ಎರಡು ಬೈಪಾಸ್ ಮಾಡಿ, ಅದನ್ನು ಸೇರಿಸಿ, ಅನುಮತಿ ಬರುವ ಹಾಗೆ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಮತ್ತು ಅಲ್ಲಿ ಪಾಲಿಟೆಕ್ನಿಕ್ ಇದೆ. ಅದನ್ನು ಹೊರಗಡೆಗೆ shift ಮಾಡಬೇಕು ಎನ್ನುವಂಥ ಒಂದು ಚಿಂತನೆ ನಡೆಯುತ್ತಿದೆ, ಸರ್ಕಾರದ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ, ಆದಷ್ಟು ಬೇಗ ಅವರಿಗೆ ಜಾಗ ಕೊಟ್ಟು ಅದನ್ನೂ ಕೂಡ ಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು: ಅದರ ಬಗ್ಗೆ ಬೇಗ decision ತೆಗೆದುಕೊಂಡುಬಿಡಿ.

ಶ್ರೀ ಬಂಡೆಪ್ಪ ಕಾಶೆಂಪೂರ್: ಅಲ್ಲಿಗೆ ಡಾಕ್ಟರ್‌ಗಳ್ಯಾರೂ ಹೋಗುತ್ತಿಲ್ಲ. ಆದ್ದರಿಂದ ಅಲ್ಲಿ bio-metric system ತೆಗೆದುಕೊಂಡು ಬನ್ನಿ.

ಶ್ರೀ ರಾಮಚಂದ್ರಗೌಡ: Bio-Metric System ಅನ್ನು ಇಡೀ ರಾಜ್ಯದಲ್ಲಿ ತೆಗೆದುಕೊಂಡು ಬರಬೇಕು ಎನ್ನುವ ಚಿಂತನೆ ಇದೆ. ಕನಿಷ್ಟ ಪಕ್ಷ, ನಮ್ಮ ಇಲಾಖೆಯಲ್ಲಿ ಕಾಲೇಜುಗಳಲ್ಲಾದರೂ ಮಾಡುವಂಥ ಒಂದು ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಬಂಡೆಪ್ಪ ಕಾಶೆಂಪೂರ್: ನಿಮಗೆ ಕಾಲೇಜುಗಳಲ್ಲಿ ತರುವುದು ಬೇಡ. Specially, ಅಲ್ಲಿ doctors duty ಮಾಡುತ್ತಿಲ್ಲ, ಅದಕ್ಕಾಗಿ General Hospitalನಲ್ಲಿ ತೆಗೆದುಕೊಂಡು ಬನ್ನಿ.

ಶ್ರೀ ರಾಮಚಂದ್ರಗೌಡ: ಆಯಿತು, ಅದರ ಬಗ್ಗೆ ಯೋಚನೆ ಮಾಡುತ್ತೇನೆ.

ಲಿಂಗಸುಗೂರು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಿರುವುದರ ಬಗ್ಗೆ

1116 ಶ್ರೀ ಮಾನಪ್ಪ ವಜ್ಜಲ್ (ಲಿಂಗಸುಗೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕು ಕೇಂದ್ರದಲ್ಲಿರುವ ಆಸ್ಪತ್ರೆಯನ್ನು ಜರ್ಮನ್ ಸಹಯೋಗದೊಂದಿಗೆ 100 ಹಾಸಿಗೆಯುಳ್ಳ ಆಸ್ಪತ್ರೆಯನ್ನಾಗಿ ಪರಿವರ್ತನೆಗೊಳಿಸಿ ಮೇಲ್ದರ್ಜೆಗೇರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ 100 ಹಾಸಿಗೆಯ ಆಸ್ಪತ್ರೆಯಲ್ಲಿ ಅವಶ್ಯವಿರುವ ವೈದ್ಯಾಧಿಕಾರಿಗಳು, ನರ್ಸ್‌ಗಳು, ಮಹಿಳಾ ವೈದ್ಯಾಧಿಕಾರಿಗಳು ಹಾಗೂ ಸ್ತ್ರೀರೋಗ ತಜ್ಞರ ಹುದ್ದೆಗಳು ಮಂಜೂರಾಗಿವೆಯೇ; ಮಂಜೂರಾಗಿದ್ದರೆ, ಪ್ರಸ್ತುತ ಎಷ್ಟು ಸಿಬ್ಬಂದಿಗಳ ಸೇವೆ ಲಭ್ಯವಿದೆ; ಈ ಆಸ್ಪತ್ರೆಯಲ್ಲಿ ಖಾಲಿಯಿರುವ ಸಿಬ್ಬಂದಿಗಳ ಸಂಖ್ಯೆಯೆಷ್ಟು;

ಇ) ಖಾಲಿಯಿರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳದಿರುವ ಕಾರಣವೇನು;

ಈ) ಪ್ರತಿ ವರ್ಷ ಈ ಆಸ್ಪತ್ರೆಗೆ ಖರ್ಚಾಗುವ ಮೊತ್ತವೆಷ್ಟು; ಸಂಬಳಕ್ಕಾಗಿ/ರೋಗಿಗಳಿಗಾಗಿ ಖರ್ಚಾಗುವ ಪ್ರತ್ಯೇಕ ವಿವರವನ್ನು ನೀಡುವುದು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)